# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:** | 760 (768) |
| **ಸದಸ್ಯರ ಹೆಸರು:** | ಶ್ರೀಮತಿ ಎಸ್.ವೀಣಾ ಅಚ್ಚಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು) |
| **ಉತ್ತರಿಸಬೇಕಾದ ದಿನಾಂಕ:** | 20-12-2021 |
| **ಉತ್ತರಿಸುವವರು:** | ಮಾನ್ಯ ಅರಣ್ಯ ಹಾಗೂ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕೊಡಗು ಜಿಲ್ಲೆಯಲ್ಲಿ, ಅರಣ್ಯ ಇಲಾಖೆಗೆ ಮಂಜೂರಾಗಿರುವ, ಹಾಲಿ ಕಾರ್ಯ ನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಹುದ್ದೆಗಳ ವಿವರಗಳೇನು; | ಕೊಡಗು ಜಿಲ್ಲೆಯಲ್ಲಿ ಮಂಜೂರಾಗಿರುವ, ಹಾಲಿ ಕಾರ್ಯ ನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಕಂಡಂತಿದೆ. |

| ಕ್ರ. ಸಂ. | ವೃಂದ | ಮಂಜೂರಾದ ಹುದ್ದೆಗಳ ಸಂಖ್ಯೆ | ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ |
|---|---|---|---|---|
| 1 | ಅರಣ್ಯ ಸಂರಕ್ಷಣಾಧಿಕಾರಿ | 1 | 1 | - |
| 2 | ಅರಣ್ಯ ಸಂರಕ್ಷಣಾಧಿಕಾರಿ (ಸಂಶೋಧನೆ) | 1 | - | 1 |
| 3 | ಉಪ ಅರಣ್ಯ ಸಂರಕ್ಷಣಾಧಿಕಾರಿ | 6 | 5 | 1 |
| 4 | ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ | 9 | 7 | 2 |
| 5 | ಪತ್ರಾಂಕಿತ ವ್ಯವಸ್ಥಾಪಕರು | 2 | 2 | - |
| 6 | ವಲಯ ಅರಣ್ಯಾಧಿಕಾರಿ | 27 | 21 | 6 |
| 7 | ಸಹಾಯಕ ಸಾಂಖ್ಯಿಕ ಅಧಿಕಾರಿ | 1 | 1 | - |
| 8 | ಅಧೀಕ್ಷಕರು | 6 | 3 | 3 |
| 9 | ಪ್ರಥಮ ದರ್ಜೆ ಸಹಾಯಕರು | 29 | 20 | 9 |
| 10 | ದ್ವಿತೀಯ ದರ್ಜೆ ಸಹಾಯಕರು | 30 | 8 | 22 |
| 11 | ಉಪ ವಲಯ ಅರಣ್ಯಾಧಿಕಾರಿ | 133 | 122 | 11 |
| 12 | ಅರಣ್ಯ ರಕ್ಷಕ | 174 | 120 | 54 |
| 13 | ಅರಣ್ಯ ವೀಕ್ಷಕ | 38 | 23 | 15 |
| 14 | ಶೀಘ್ರಲಿಪಿಗಾರರು | 1 | - | 1 |
| 15 | ಆಕೃತಿ ರಚನೆಕಾರರು ಗ್ರೇಡ್-1 | 1 | - | 1 |
| 16 | ಆಕೃತಿ ರಚನೆಕಾರರು ಗ್ರೇಡ್-2 | 1 | - | 1 |
| 17 | ಪೊಲೀಸ್ ಕಾನ್ಸ್‌ಟೇಬಲ್ | 2 | - | 2 |
| 18 | ವಾಹನ ಚಾಲಕರು | 9 | 1 | 8 |
| 19 | ಕೇರ್ ಟೇಕರ್ | 5 | 1 | 4 |
| 20 | ಆನೆ ಜಮೇದಾರ | 2 | - | 2 |
| 21 | ಆನೆ ಮಾವುತ | 27 | 14 | 13 |
| 22 | ಆನೆ ಕಾವಾಡಿಗ | 27 | 23 | 4 |
| 23 | ಡಿ ಗ್ರೂಪ್ | 38 | 24 | 14 |
| 24 | ಜಮೇದಾರ | 1 | - | 1 |
| 25 | ಬೆರಳಚ್ಚುಗಾರರು | 4 | - | 4 |
| 26 | ಪರಿಚಾರಕರು | 1 | - | 1 |
| 27 | ಲಾರಿ ಕ್ಲೀನರ್ | 1 | - | 1 |
| 28 | ಮಾಲಿ | 1 | - | 1 |
| | **ಒಟ್ಟು** | **578** | **396** | **182** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಆ) | ಜಿಲ್ಲೆಯಲ್ಲಿ ಮಾನವ-ವನ್ಯಜೀವಿ ಸಂಘರ್ಷ ನಿರಂತರವಾಗಿ ವರದಿಯಾಗಿರುತ್ತಿರುವ ಹಿನ್ನಲೆಯಲ್ಲಿ, ಜಿಲ್ಲೆಗೆ ಹೆಚ್ಚುವರಿಯಾಗಿ ಹುದ್ದೆಗಳನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದೇ; | ಪ್ರಸ್ತುತ ಅಂತಹ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |
| (ಇ) | ಜಿಲ್ಲೆಯಲ್ಲಿ, ನಿರಂತರ ಮಾನವ-ವನ್ಯಜೀವಿ ಸಂಘರ್ಷದ ಹಿನ್ನಲೆಯಲ್ಲಿ ಇಲಾಖೆಗೆ ಅತ್ಯಗತ್ಯವಾಗಿರುವ ಆಧುನಿಕ ಸಂಪರ್ಕ ಸಾಧನಗಳು, ಕಛೇರಿಗಳು ಹಾಗೂ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದೆಯೇ? (ವಿವರ ನೀಡುವುದು) | ಮಾನವ-ವನ್ಯಜೀವಿ ಸಂಘರ್ಷ ತಡೆಗಟ್ಟುವ ನಿಟ್ಟಿನಲ್ಲಿ ಕೈಗೊಂಡ ಅತ್ಯಗತ್ಯವಾದ ಅಧುನಿಕ ಸಂಪರ್ಕ ಸಾಧನ, ಕಟ್ಟಡ ಮತ್ತು ಮೂಲಭೂತ ಸೌಕರ್ಯಗಳನ್ನು ಈ ಕೆಳಕಂಡಂತೆ ಕಲ್ಪಿಸಲಾಗಿದೆ.<br>1. ಆಧುನಿಕ ಸಂಪರ್ಕ ಸಾಧನಗಳಾದ ಜಿ.ಪಿ.ಎಸ್, ವೈರ್ ಲೆಸ್ ಡ್ರೋನ್, ಬಂದೂಕು, ವಾಕಿಟಾಕಿ, ಬೈನಾಕ್ಯೂಲರ್, ಕ್ಯಾಮೆರಾ ಟ್ರಾಪ್, ಚೈನ್-ಸಾ ಹಾಗೂ ಟಾರ್ಚ್ ಗಳನ್ನು ಇಲಾಖಾ ಸಿಬ್ಬಂದಿಗಳಿಗೆ ಒದಗಿಸಲಾಗಿದೆ.<br>2. ಕ್ಷಿಪ್ರ ಕಾರ್ಯಪಡೆ ತಂಡಗಳ ರಚನೆ, ಕಾಡಾನೆ ಹಿಮ್ಮೆಟ್ಟಿಸುವ ತಂಡ ರಚನೆ ಮಾಡಿದ್ದು, ವಾಹನ ಸೌಕರ್ಯ ಒದಗಿಸಲಾಗಿದೆ.<br>3. ಕಳ್ಳಬೇಟೆ ತಡೆ ಶಿಬಿರಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ಶಿಬಿರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಮೂಲ ಭೂತ ಸೌಕರ್ಯಗಳಾದ ಕಟ್ಟಡ, ನೀರು ಮತ್ತು ಶೌಚಾಲಯಗಳು, ಅಲ್ಲದೆ, ಶಿಬಿರದ ಕಟ್ಟಡಕ್ಕೆ ವಿದ್ಯುತ್ ಸೌಕರ್ಯ/ಸೋಲಾರ್ ದೀಪಗಳನ್ನು ಅಳವಡಿಸಲಾಗಿದೆ. ಸದರಿ ಕಳ್ಳಬೇಟೆ ತಡೆ ಶಿಬಿರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಆಹಾರ ಭತ್ಯೆ, ಸಮವಸ್ತ್ರ, ರೈನ್ ಕೋಟ್, ಶೂಸ್ ಇತ್ಯಾದಿಗಳನ್ನು ಒದಗಿಸಲಾಗುತ್ತಿದೆ. |

ಕಡತ ಸಂಖ್ಯೆ: ಅಪಜೀ 295 ಅಅಸೇ 2021

(ಉಮೇಶ ವಿ.ಕತ್ತಿ)
ಅರಣ್ಯ ಹಾಗೂ ಆಹಾರ, ನಾಗರಿಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು.